**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ. 580/2016 DW– 2**

**ದಿನಾಂಕ: 19-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಎಸ್. ಎಸ್. ಶೇಖರಾಚಾರ್ |
| ತಂದೆಯ ಹೆಸರು | : | ಸುಬ್ಬಣ್ಣಾ ಚಾರ್ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಚಿನ್ನ ಮತ್ತು ಬೆಳ್ಳಿ ಕೆಲಸ |
| ವಾಸಸ್ಥಳ | : | ದೊಡ್ಡಪೇಟೆ , ತಿಪಟೂರು ಟೌನ್ |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ಆರೋಪಿತನ ಪರಿಚಯ ನನಗೆ ಇದೆ.

ಪಿರ್ಯಾದುದಾರರು ನನಗೆ ಸುಮಾರು 5-6 ವರ್ಷಗಳಿಂದ ಪರಿಚಯ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ 7-8 ವರ್ಷಗಳಿಂದ ಪರಿಚಯ. ಪಿರ್ಯಾದಿ ನನ್ನ ವಿರುದ್ಧಯಾವುದೇ ದೂರನ್ನು ದಾಖಲಿಸಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

**ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಆರೂಪಿ ಪರ ವಕೀಲರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ವಾಟೀ ಸವಾಲು : ಶ್ರೀ ವಿ ಸಿ ವಕೀಲರಿಂದ :-**

ಪಿರಾದುದಾರ ನನ್ನ ವಿರುದ್ದ ಇದೇ ನ್ಯಾಯಾಲಯದಲ್ಲಿ ಸಿಸಿ ನಂ. 598/2016 ರಂತೆ ಪ್ರಕರಣ ದಾಖಲುಮಾಡಿದ್ದರು ಎಂದರೆ ಸರಿಯಲ್ಲ. ನಾನು ಪಿರಾದುದಾರರೊಂದಿಗೆ ನ್ಯಾಯಾಯದ ಹೊರಗೆ ರಾಜೀ ಮಾಡಿಕೊಂಡು ಪ್ರಕರಣವನ್ನು ಇತ್ಯರ್ದ. ಮಾಡಿಕೊಂಡಿದೆ ಎಂದರೆಸ ರಿಯಲ್ಲ. ಪಿರ್ಯಾದುದಾರರ ಅಣ್ಣನ ಮಗನಾದ ಪ್ರವೀಣ ರವರು ತುರುವೇಕೆರೆ ನ್ಯಾಯಾಲಯದಲ್ಲಿ ಓ ಎಸ್ ನಂ.15/2019 ರಂದು ನನ್ನ ವಿರುದ್ದ ಪ್ರಕರಣ ದಾಖಲು

ಮಾಡಿದ್ದರು ಎಂದರೆ ಗೊತ್ತಿಲ್ಲ. ಸದರಿ ಎರಡೂ ಪ್ರಕರಣದ ಬಗ್ಗೆ ಮಾಹಿತಿ ತಿಳಿದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಪಿರಾದಿಯೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ.ನಾನು ಪಿರ್ಯಾದಿಗೆ ಯಾವುದೇ ಹಣ ಪಾವತಿ ಮಾಡಿಲ್ಲ. ಪಿರಾದಿ ನನಗೆ ಯಾವುದೇ ದಾಖಲಾತಿ ಕೊಟ್ಟಿಲ್ಲ. ಪಿರಾದಿಯು ನನ್ನ ಮನೆಯ ಟೈಟಲ್ ಡೀಡ್ , ಅಗ್ರಿಮಂಟ್ , ಖಾಲಿ ಸ್ಟಾಂಪ್ ಪೇಪರ್ , 3 ಚಕ್ಕಳನ್ನು ಕೊಟ್ಟಿದ್ದರು ಎಂದರೆ ಸ ರಿಯಲ್ಲ. ಆರೋಪಿತರ ಸಂಬಂದ ಚಕ್ಕುಗಳನ್ನು ನನಗೆ ಕೊಟ್ಟಿರುವುದಿಲ್ಲ. ನಾನು ಪಿರ್ಯಾದಿಯ ಮೇಲೆ ಹೇಳಿದ ದಾಖಲಾತಿಗಳನು ಪಡೆದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದಾಖಲಾತಿಗಳನ್ನು ಅರೋಪಿಯಿಂದ ಪಿರಾದುದಾರರರಿಗೆ ಕೊಟು ನಾನು ಸಾಲ ಪಡೆದಿದ್ದೇ ಎಂದರೆ ಸರಿಯಲ್ಲ. ಆ ಸಾಲಕ್ಕೆ ಅರೋಪಿ ಸಾಕ್ಷಿಯಾಗಿದ್ದರು ಎಂದರೆ ಸರಿಯಲ್ಲ, ಅರೋಪಿ ಸಾಕ್ಷಿಯಾಗಿದ್ದರಿಂದ ಪಿರ್ಯಾದುದಾರರು ಆರೋಪಿಯಿಂದ ಚಕ್ಕು ಪಡೆದಿದ್ದರು ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರೊಂದಿಗೆ ಶಾಮೀಲಾಗಿ ಎಲ್ಲಾ ದಾಖಲಾತಿ ಪಡೆದು ಪಿರಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪರಕರಣದಲ್ಲಿ ಅರೋಪಿಯು ಪಿರಾದುದಾರರಿಗೆ ಕೊಟ್ಟ ಹಣವನ್ನು ನಾನು ಕೊಡಬೇಕಾಗುತ್ತದೆ ಎಂದು ಹೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

**(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾ ಯಾಧೀಶರು, ತಿಪಟೂರು.**